ಗುಣಿಗಳ ಗುಣರತ್ನ ವಿಭೂ
ಷಣಮೆಸೆವುದೆ ವಿಕಳಹೃದಯರಾದವರ್ಗೆ ನೃಪಾ
ಗ್ರಣಿ ಪೇಳ್ ತುಪ್ಪೇಱಿದದ
ರ್ಪಣದೊಳ್ ಪಜ್ಜಳಿಸಲಾರ್ಪುದೇ ಪ್ರತಿಬಿಂಬಂ|| ಎಂದಿದೆ.

ಜಿಡ್ಡು ಹತ್ತಿದ ಕನ್ನಡಿಯಲ್ಲಿ ಪ್ರತಿಬಿಂಬವು ಪ್ರಜ್ವಲಿಸುತ್ತದೆಯೆ? ಈ ಪ್ರಶ್ನೆಯಲ್ಲಿ ಶತಶತಮಾನಗಳಿಂದಲೂ ನಾನಾ ಸ್ವರೂಪದ ಹಿಂಸೆಯೇ ಧರ್ಮ ಎಂದುಕೊಂಡು ಬರಲಾಗಿರುವುದನ್ನು ಹೇಳಲಾಗಿದೆ. ಅಸಂಖ್ಯಾತ ಪ್ರಾಣಿಬಲಿಯಿಂದ ದೇವರುಗಳು ಒಲಿಯುತ್ತವೆ, ಸೈನಿಕರನ್ನು ಕೊಲ್ಲುವುದೇ ರಾಜಧರ್ಮ, ಯುದ್ಧ ಮಾಡುವುದೇ ಕ್ಷಾತ್ರಧರ್ಮ, ಯುದ್ಧದಿಂದ ಹಿಂಜರಿಯುವವನು ನರಕಭಾಜನನಾಗುತ್ತಾನೆ, ಯುದ್ಧ ಮಾಡಿ ಸಾಯುವವನು ವೀರಸ್ವರ್ಗವನ್ನು ಸೇರಿ ಇಷ್ಟಾಂಗನೆಯರೊಡನೆ ಸುಖವಾಗಿರುತ್ತಾನೆ ಎಂಬ ಈ ಭಾವವನ್ನು ಹುಟ್ಟುಹಾಕುತ್ತಾ ಇದಕ್ಕೆ ಪೂರ್ವ ಪೀಠಿಕೆಯಂತೆ ಬಲಿಗೂ, ರಕ್ತ ಸುರಿಸುವುದಕ್ಕೂ ಮುಗ್ಧರು ಹೆದರದಿರಲಿ, ಅವರು ಸೈನ್ಯ ವೃತ್ತಿಯನ್ನು ಧೈರ್ಯದಿಂದ ಹಿಡಿಯಲೆಂದು ಅದಕ್ಕೆ ಆರಾಧಾನಾ ಸ್ವರೂಪವನ್ನು ದೈವದ ಹೆಸರಿನಲ್ಲಿಯೇ ಸಾಮೂಹಿಕ ಬಲಿ ಪದ್ಧತಿಯನ್ನು ರಾಜಮಹಾರಾಜರು ಜಾರಿಗೆ ತಂದರೆನಿಸುತ್ತದೆ. ಈ ಬಗೆಯ ಮೌಢ್ಯವನ್ನು ಜನ್ನ ತಿಳಿದವನೇ ಆಗಿದ್ದು ಪವಿತ್ರ ಧರ್ಮಸ್ವರೂಪ ಮಕ್ಕಳ ಮನಸ್ಸಿನಂತೆ ನಿರ್ಮಲವಾದುದು ಎಂಬಂತೆ ಕಥೆಯನ್ನು ನಿರೂಪಿಸುತ್ತ, ಸಂಕಲ್ಪ ಹಿಂಸೆಯೂ ಯಾವ ಬಗೆಯ ದಾರುಣತೆಗೆ ದಾರಿಯಾಯಿತೆಂದು ಅಭಯರುಚಿ ಅಭಯಮತಿಯರೂ ತಮ್ಮದೇ ಪೂರ್ವಜನ್ಮದ ಕಥೆಯಿಂದ ನಿರೂಪಿಸುತ್ತಾರೆ. ಅಲ್ಲಿಂದ ಮುಂದೆ ಯಶೋಧರನ, ಅಮೃತಮತಿಯ, ಅಷ್ಟಾವಂಕನ ಕಥೆ ತೆರೆದುಕೊಳ್ಳುತ್ತದೆ. ಇದೂ ಕೂಡ ವಿಧಿ ವಿಳಸನದ ಕಥೆ. ಮನುಷ್ಯನಿಗೆ ಎಲ್ಲ ದುರಂತ, ಅಪಾಯಗಳ ಅರಿವಿದ್ದೂ ಅದರತ್ತಲೇ ಮೋಹಗೊಳ್ಳುತ್ತ ನಡೆಯುವುದರ ವ್ಯಥೆ. ಉತ್ಪ್ರೇಕ್ಷೆ, ಪವಾಡಗಳ ಬಾಹುಳ್ಯವಿಲ್ಲದೆ ಜನ್ನ ಮನುಷ್ಯನ ಅಂತರಂಗದ ಕಥನವನ್ನು ದಿಗ್ದರ್ಶಿಸುತ್ತಾನೆ. ಈ ಕೃತಿಗಳಲ್ಲಿ ಭವಾವಳಿಯ ವಿವರಗಳಿದ್ದರೂ ಅದು ಗೌಣ. ಹಾಗೆ ನೋಡಿಕೊಂಡರೆ ಆದಿಪುರಾಣ ಮತ್ತು ಅಜಿತ ತೀರ್ಥಂಕರ ಪುರಾಣ ಕಥೆಗಿಂತಲೂ ಜನ್ನನ ಯಶೋಧರ ಚರಿತೆಯ ಕಥೆ ಮನುಷ್ಯನ ವಾಸ್ತವ ಸ್ಥಿತಿಯ ಸಂಘರ್ಷಗಳಿಗೆ ಹತ್ತಿರವಾಗಿದೆ. ಅಂಥ ಮೋಹ ವಿಮುಕ್ತ ಮನಸ್ಸು ಅಹಿಂಸೆಯ ತಂಬೂರಿಯ ತಂತಿಯ ನಾದಕ್ಕೆ ಚಿತ್ತಗೊಟ್ಟು, ಕತ್ತಿಯ ಏಟಿಗೆ ಬಲಿಯಾಗದಿರಲಿ ಎಂಬಂತೆ ಈ ಕಥನ ತತ್ವವಿದೆ.

## ಕೃಷ್ಣಮೂರ್ತಿ ಹನೂರು

ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ (ಚಾಮರಾಜ ನಗರ) ಸಂದರ್ಶಕ ಪ್ರಾಧ್ಯಾಪಕರು. 'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ', 'ಕಳೆದ ಮಂಗಳವಾರ ಮುಸ್ಸಂಜೆ' ಎಂಬ ಕಥಾಸಂಕಲನಗಳನ್ನು, 'ಬಾರೋ ಗೀಜಗನೆ', 'ನಿಕ್ಷೇಪ', 'ಅಜ್ಞಾತನೊಬ್ಬನ ಆತ್ಮಚರಿತ್ರೆ', 'ಸಿದ್ಧಿಯ ಕೈ ಚಂದ್ರನತ್ತ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಅವರ ಪಿಎಚ್.ಡಿ. ಮಹಾಪ್ರಬಂಧ 'ಮ್ಯಾಸ ಬೇಡರು' ಬುಡಕಟ್ಟು ಅಧ್ಯಯನದ ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರಗೊಂಡಿದೆ. ಜಾನಪದಕ್ಕೆ ಸಂಬಂಧಿಸಿದ ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ. 'ಕಾಲುದಾರಿಯ ಕಥನಗಳು' ಅವರ ಜಾನಪದ ಕ್ಷೇತ್ರ ಕಾರ್ಯದ ಅನುಭವ ಕಥನವಾಗಿದೆ.